have been there, they have been extended. However, now the Corporation has taken a decision to repatrate them to their parent bodies.

ವಿಷಯ :- ಮಂಗಳೂರು ಬೈಕಂಪಾಡಿಯಲ್ಲಿ ಇ. ಎಸ್. ಐ ಆಸ್ಪತ್ರೆ

Q: 1069

ಶ್ರಿ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಮಂಗಳೂರು ಬೈಕಂಪಾಡಿ ಪರಿಸರದ ಅಪಾರ ಸಂಖ್ಯೆಯ ಕಾರ್ಮಿಕರು ಮತ್ತು ಕೇಂದ್ರೋದ್ಯಮಿಗಳ ನೌಕರರಿಗಾಗಿ ನೂತನ ಇ. ಎಸ್.ಐ ಆಸ್ಪತ್ರೆಯನ್ನು ಪ್ರಾರಂಬಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಆ) ಹಾಗಿದ್ದಲ್ಲಿ ಈ ದಿಸೆಯಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ಹೌದು. ಕಾರಾವಿ ಚಿಕಿತ್ಸಾಲಯವನ್ನು ಪ್ರಾರಂಭಿಸಲಾಗುವುದು.

ಆ) ಬೈಕಂಪಾಡಿ ಪ್ರದೇಶದಲ್ಲಿ ಚಿಕಿತ್ಸಾಲಯವನ್ನು ಪ್ರಾರಂಭಿಸಲು ಕಟ್ಟಡವು ನಿರ್ಮಾಣ ಹಂತದಲ್ಲಿದ್ದು ಕಟ್ಟಡ ನಿರ್ಮಾಣವಾದ ನಂತರ ಚಿಕಿತ್ಸಾಲಯವನ್ನು ಪ್ರಾರಂಭಿಸಲು ಕ್ರಮವನ್ನು ಕೈಗೊಳ್ಳುವುದು.

ಶ್ರೀ ವಿಜಯಕುಮಾರ್ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ನವ ಮಂಗಳೂರು ಬಂದರು ಬೈಕಂಪಾಡಿ ಪ್ರದೇಶದಲ್ಲಿ ಜಿಲ್ಲೆಗೆ ಸಂಬಂಧಪಟ್ಟ ನಮ್ಮ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟ ಮತ್ತು ರಾಷ್ಟ್ರಕ್ಕೆ ಸಂಬಂಧಪಟ್ಟ ಹಲವಾರು ಉದ್ದಿಮೆಗಳು ಇವೆ. ಉದಾಹರಣೆಗಾಗಿ ನವಮಂಗಳೂರು ಬಂದರು, ಮಂಗಳೂರು ಕೆಮಿಕಲ್ಸ್ ಆಂಡ್ ಫರ್ಟಿಲೈಸರ್ಸ್ ಮತ್ತು ಇತರ ಇಂಡಸ್ಟ್ರಿಯಲ್ ಎಸ್ಟೇಟ್ ಇವೆ. ಅದೂ ಅಲ್ಲದೆ ಮಂಗಳೂರು ರಿಫೈನರಿ ಬರುತ್ತಿದೆ. ಜಯಪ್ರಕಾಶ್ ಸ್ಟೀಲ್ ಇಂಡಸ್ಟ್ರಿ ಬರುತ್ತಿದೆ. ಇಲ್ಲಿ ಇಷ್ಟರವರೆಗೆ ಯಾವುದೇ ಒಂದು ಇ.ಎಸ್.ಐ. ಡಿಸ್‌ಪೆನ್‌ಸರಿ ಇಲ್ಲೇ ಮಾಡುತ್ತೇವೆ ಎಂಬ ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ಮಾಡುವುದಕ್ಕೆ ಬಿಲ್ಡಿಂಗ್ ಕಟ್ಟಲು ಸುಮಾರು ಸಮಯವಾಗಬಹುದು . ಆದ್ದರಿಂದ ತಾತ್ಕಾಲಿಕವಾಗಿ ಒಂದು ಡಿಸ್‌ಪೆನ್‌ಸರಿಯನ್ನಾದರೂ ಕೂಡಲೇ ಪ್ರಾರಂಭ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಸನ್ಮಾನ್ಯ ಅಧ್ಯಕ್ಷರೇ, ಈಗತಾನೇ ಬೈಕಂಪಾಡಿಯಲ್ಲಿ ನಾವು ಒಂದು ಡಿಸ್ಪೆನ್‌ಸರಿ ಸ್ಥಾಪನೆ ಮಾಡಲಿಕ್ಕೆ ಕಟ್ಟಡವನ್ನು ರಚಿಸುತ್ತಿದ್ದೇವೆ. ಬೇಗನೆ ಆ ಕಟ್ಟಡ ಆದ ಕೂಡಲೇ ಪಣಂಬೂರಿನಿಂದ ಡಿಸ್ಪೆನ್‌ಸರಿಯನ್ನು ಅಲ್ಲಿ ಸ್ಥಳಾಂತರ ಮಾಡಿ ಅಲ್ಲಿ ಸ್ಥಾಪನೆ ಮಾಡುತ್ತೇವೆ.

ಶ್ರೀ ವಿಜಯ ಕುಮಾರ್ ಶೆಟ್ಟಿ : ಅದು ಆಗುವಾಗ ತುಂಬಾ ಸಮಯ ಆಗಬಹುದು.

ಇನ್ನೂ ಕಟ್ಟಡ ಪ್ರಾರಂಭಮಾಡಲಿಲ್ಲವೆಂದು ತೋರುತ್ತದೆ. ಸುಮಾರು 4-5 ಸಾವಿರಕ್ಕಿಂತಲೂ ಹೆಚ್ಚು ನೌಕರರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಮಂಗಳೂರು ರಿಫೈನರಿ ಬರುತ್ತದೆ. ನ್ಯೂ ಮಂಗಳೂರು ಪೋರ್ಟ್ ಇದೆ. ಎಂ. ಸಿ. ಎಫ್. ಇದೆ. ಇತರ ಹಲವಾರು ಯುನಿಟ್‌ಗಳು ಅಲ್ಲಿ ಬರುತ್ತಿವೆ. ಆದ್ದರಿಂದ ಆಟ್‌ಲೀಸ್ಟ್ ಬಾಡಿಗೆ ಕಟ್ಟಡವನ್ನು ತೆಗೆದುಕೊಂಡು ಒಂದು ಡಿಸ್‌ಪೆನ್ಸರಿಯನ್ನು ಕೂಡಲೇ ಪ್ರಾರಂಭ ಮಾಡುವುದು ಒಳ್ಳೆಯದು ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಸನ್ಮಾನ್ಯ ಅಧ್ಯಕ್ಷರೇ, ಪಣಂಬೂರಿನಲ್ಲಿ ಎಂ.ಸಿ.ಎಫ್. ಹಾಗೂ ಹಾರ್‌ಬರ್ ಇದೆ, ಅಲ್ಲಿಯೂ ಒಂದು ಡಿಸ್‌ಪೆನ್ಸರಿ ಇದೆ. ನಾವು ದೊಡ್ಡದಾಗಿ ಬೈಕಂಪಾಡಿಯಲ್ಲಿ ಎಲ್ಲಾ ನಮ್ಮ ಕಾರ್ಮಿಕರಿಗೆ ಉಪಯೋಗವಾಗುವ ಹಾಗೆ ಒಂದು ಡಿಸ್‌ಪೆನ್ಸರಿಯನ್ನು ಬೇಗನೆ ಸ್ಥಾಪನೆ ಮಾಡತ್ತೇವೆ.

<u>ವಿಷಯ :- ಗದಗ್‌ನಲ್ಲಿ ಹಮಾಲರಿಗೆ ವಸತಿ ಗೃಹಗಳ ನಿರ್ಮಾಣ.</u>

Q:979

ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಗದಗ್‌ನಲ್ಲಿ ಕೃಷಿ ಹುಟ್ಟುವಳಿ ಮಾರಾಟ ಸಮಿತಿಯ (ಎ. ಪಿ. ಎಂ. ಸಿ.) ಹಮಾಲರಿಗೆ ವಸತಿ ಗೃಹ ಕಟ್ಟಿಸುವ ಯೋಜನೆಯು ಗೃಹ ಮಂಡಳಿಯ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಈ ಯೋಜನೆಗೆ ಮಂಜೂರಾತಿಯನ್ನು ಯಾವಾಗ ನೀಡುವುದು ?

ಶ್ರೀ ಗೋಪಿನಾಥ ಆರ್. ಸಾಂದ್ರ (ವಸತಿ ಸಚಿವರು) :

ಅ) ಯೋಜನೆ ರೂಪಿಸಲಾಗುತ್ತಿದೆ.

ಆ) ಹುಡ್ಕೋ ಸಂಸ್ಥೆಯಿಂದ ಯೋಜನೆಯ ಸಾಲಕ್ಕೆ ಮಂಜೂರಾತಿ ದೊರೆತ ನಂತರ ನಿರ್ಮಾಣ ಕಾರ್ಯ ಕೈಗೊಳ್ಳಲಾಗುವುದು.

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಗದಗಿನಲ್ಲಿ ಹಮಾಲರು ತಮ್ಮ ಮನೆ ಕಟ್ಟಿಸಲಿಕ್ಕೆ ತಾವೇ ಜಮೀನನ್ನು ಖರೀದಿ ಮಾಡಿ ಹೌಸಿಂಗ್ ಬೋರ್ಡ್‌ಗೆ ಕೊಟ್ಟು ಸುಮಾರು ಒಂದು ವರ್ಷ ಕಾಲವಾಯಿತು. ಹುಡ್ಕೊ ಸಂಸ್ಥೆಯಿಂದ ಸಾಲ ಪಡೆದು ಅದು ಪ್ರಾರಂಭವಾಗಬೇಕಾದರೆ ಇನ್ನೂ ಎಷ್ಟು ದಿನ ಬೇಕಾಗುವುದು ಎನ್ನುವುದನ್ನು ಮಾನ್ಯ ವಸತಿ ಸಚಿವರು ಹೇಳಬೇಕು. ಆಮೇಲೆ ಉತ್ತರ ಕರ್ನಾಟಕದಲ್ಲಿ ಇಂತಹ ವಸತಿ ಸಂಕೀರ್ಣಗಳು ಹಾಗೂ ಸೆಟಲೈಟ್ ಟೌನ್‌ಶಿಪ್ ಸಾಕಷ್ಟು ಮಾಡದೇ ಇರುವದು ಸಚಿವರ ಗಮನಕ್ಕೆ ಬಂದಿದೆಯೇ? ಒಂದು ವೇಳೆ ಬಂದಿದ್ದರೆ ಆ ಭಾಗದಿಂದ ಬರುವ ಇಂತಹ ಪ್ರಸ್ತಾವನೆಗಳಿಗೆ ಇನ್ನು ಮೇಲೆ ಸರ್ಕಾರ ಮತ್ತು ಹೌಸಿಂಗ್ ಬೋರ್ಡ್‌ನವರು ಆದ್ಯತೆ ಕೊಟ್ಟು ಕೆಲಸ ಮಾಡುವರೇ ಎನ್ನುವುದನ್ನು ತಿಳಿಸಬೇಕು.

ಶ್ರೀ ಗೋಪಿನಾಥ ಆರ್. ಸಾಂದ್ರ : ಎ. ಪಿ. ಎಂ. ಸಿ. ಯವರು ಸುಮಾರು 10 ಎಕರೆ 10